# ನೋಟಿಫಿಕೇಷನ್: ಮತ್ತೆ ನೋಡುವುದು ಹೇಗೆ?

■ **ಶಶಿಕುಮಾರ್ ಸಿ.**

ತಂತ್ರಜ್ಞಾನ ಮಗ್ಗುಲು ಬದಲಿಸಿದಂತೆಯೇ ಸ್ಮಾರ್ಟ್‌ಫೋನ್ ವಲಯದಲ್ಲೂ ಸಾಕಷ್ಟು ಅಪ್‌ಡೇಟ್ಸ್‌ಗಳು ಆಗುತ್ತಲೇ ಇರುತ್ತವೆ. ಯಾವುದೇ ಆ್ಯಪ್ ಆಧರಿತ ಸೇವೆಯಿರಲಿ, ನ್ಯೂಸ್ ಆ್ಯಪ್ ಇರಲಿ, ಇಲ್ಲವೇ ಯಾವುದೇ ಮಾಹಿತಿ ನೀಡುವ ಪೋರ್ಟಲ್‌ಗಳಿರಲಿ – ಅವುಗಳನ್ನು ಕುರಿತು ಸ್ಮಾರ್ಟ್‌ಫೋನ್‌ಗಳಲ್ಲಿ ನೊಟೀಫಿಕೇಷನ್ ಬರುತ್ತಲೇ ಇರುತ್ತವೆ.

ಫೋನ್‌ಗೆ ಬರುವ ನೋಟಿಫಿಕೇಷನ್‌ಗಳಲ್ಲಿ ಕೆಲವು ಮಹತ್ವದ್ದಾಗಿರುತ್ತವೆ. ಇನ್ನೂ ಕೆಲವು ಸಾಮಾನ್ಯ ನೋಟಿಫಿಕೇಷನ್‌ಗಳು. ಈ ನೋಟಿಫಿಕೇಷನ್‌ಗಳ ಬಗ್ಗೆ ಬಹುತೇಕರದು ಉದಾಸೀನ ಮನೋಭಾವ. ಅವು ಬಂದ ಕೂಡಲೇ ಹಿಂದುಮುಂದು ನೋಡದೆ ಕ್ಲಿಯರ್ ಮಾಡಿಬಿಡುತ್ತಾರೆ. ಈ ದುಡುಕಿನಲ್ಲಿ ಮಹತ್ವದ ನೋಟಿಫಿಕೇಷನ್‌ಗಳೂ ಅಳಿಸಿಹೋಗುತ್ತವೆ. ಡಿಲಿಟ್ ಆದಂತಹ ನೋಟಿಫಿಕೇಷನ್‌ಗಳನ್ನು ಮತ್ತೆ ಹುಡುಕಿ ನೋಡುವ ಅನಿವಾರ್ಯ ಕೆಲವರಿಗೆ ಎದುರಾಗುತ್ತದೆ. ಅಂತಹ ಸಂದರ್ಭದಲ್ಲಿ ಡಿಲಿಟ್ ಆದಂತಹ ನೋಟಿಫಿಕೇಷನ್‌ಗಳನ್ನು ನೋಡಲು ಆ್ಯಂಡ್ರಾಯ್ಡ್, 'ನೋಟಿಫಿಕೇಷನ್ ಹಿಸ್ಟರಿ' ಅನ್ನೋ ಹೊಸ ಆಯ್ಕೆಯೊಂದನ್ನು ಪರಿಚಯ ಪಡಿಸಿದೆ.

ಸದ್ಯ ನೊಟೀಫಿಕೇಷನ್‌ಗಳು ಫೋನ್‌ನ ಅತ್ಯಗತ್ಯ ಭಾಗವಾಗಿವೆ. ಇವು ಬಳಕೆದಾರರು ಮತ್ತು ಡಿವೈಸ್ ನಡುವಿನ ಕೊಂಡಿಯಾಗಿವೆ. ಉದಾಹರಣೆಗೆ, ಬಳಕೆದಾರರು ಇನ್ನೊಬ್ಬರಿಂದ ಪ್ರಮುಖ ಸಂದೇಶವನ್ನು ಅಥವಾ ಯಾವುದೇ ಅಪ್ಲಿಕೇಶನ್‌ನಿಂದ ಸೂಚನೆಗಳನ್ನು ಫೋನ್‌ನಲ್ಲಿ ಪಡೆದಿರುತ್ತಾರೆ. ಅಂತಹ ಸೂಚನೆಗಳು ಡಿಲಿಟ್ ಆದ ಸಮಯದಲ್ಲಿ ಈ ನೋಟಿಫಿಕೇಷನ್ ಹಿಸ್ಟರಿ ನೆರವಿಗೆ ಬರುತ್ತದೆ.

ಬಳಕೆದಾರರು ತಮ್ಮ ಆ್ಯಂಡ್ರಾಯ್ಡ್ ಫೋನ್‌ನಲ್ಲಿ ಬಂದಿರುವ ನೋಟಿಫಿಕೇಷನ್‌ಗಳ ಹಿಸ್ಟರಿಯನ್ನು ವೀಕ್ಷಿಸಲು ಅವಕಾಶ ಇದೆ. ನೀವು ಈಗಾಗಲೇ ಕ್ಲಿಯರ್ ಮಾಡಿರುವ ನೋಟಿಫಿಕೇಷನ್ ಅನ್ನು ಸಹ ಪಡೆದುಕೊಳ್ಳುವುದಕ್ಕೆ ಅವಕಾಶವಿದೆ. ಆದರೆ 'ಆಂಡ್ರಾಯ್ಡ್ 10'ರಲ್ಲಿ ಈ ಫೀಚರ್ಸ್ ಅನ್ನು ನೇರವಾಗಿ ಎಂಟ್ರಿ ನೀಡಲು ಅವಕಾಶವಿಲ್ಲ. ಹಾಗೆಂದು ಚಿಂತಿಸುವ ಅಗತ್ಯವಿಲ್ಲ. ನೋಟಿಫಿಕೇಷನ್ ಹಿಸ್ಟರಿಯನ್ನು ಪರಿಶೀಲಿಸಲು ಗೂಗಲ್ ಅವಕಾಶ ನೀಡುತ್ತದೆ. ಇದಕ್ಕಾಗಿ 'ನೊಟೀಫಿಕೇಷನ್ ಹಿಸ್ಟರಿ' ಫೀಚರ್ಸ್ ಅನ್ನು ಸೆಕೆಂಡ್ ಡೆವಲಪರ್ ಪ್ರಿವ್ಯೂ (second developer preview) ಎಂದು ಗುರುತಿಸಲಾಗಿದೆ. ಇದರಲ್ಲಿ ನೀವು ಇತ್ತೀಚೆಗಿನ ಫೋನ್‌ನ ಅಧಿಸೂಚನೆಗಳ ಪಟ್ಟಿಯನ್ನು ಕಾಣಬಹುದಾಗಿದೆ.




ಪ್ರಸ್ತುತ, ನೀವು ಮಿಸ್ ಮಾಡಿಕೊಂಡಿರುವ ಪ್ರತಿಯೊಂದು ಸಂದೇಶ ಅಥವಾ ನವೀಕರಣವನ್ನು ಅಧಿಸೂಚನೆ ಲಾಗ್ ವಿಜಿಟ್‌ನಲ್ಲಿ ಕಾಣಬಹುದಾಗಿದೆ. ಒಂದು ವೇಳೆ ಬಳಕೆದಾರರ ಫೋನ್‌ನಲ್ಲಿ ಈ ಫೀಚರ್ಸ್ ಲಭ್ಯವಿಲ್ಲದಿದ್ದರೆ, ಗೂಗಲ್ ಪ್ಲೇಸ್ಟೋರ್‌ನಲ್ಲಿ 'ನೋಟಿಫಿಕೇಷನ್ ಹಿಸ್ಟರಿ ಲಾಗ್' ಅನ್ನುವ ಆ್ಯಪ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು. ಇದು ಉತ್ತಮ ಅಪ್ಲಿಕೇಷನ್ ಆಗಿದ್ದು, ಸ್ಟಾಕ್ ಅಧಿಸೂಚನೆ ಲಾಗ್ ಆಯ್ಕೆಗಿಂತ ಹೆಚ್ಚಿನ ವಿವರಗಳನ್ನು ನಿಮಗೆ ನೀಡುತ್ತದೆ. ಇದು ಟ್ವಿಟರ್, ವಾಟ್ಸಾಪ್ ಮತ್ತು ಇತರ ಅಪ್ಲಿಕೇಷನ್‌ಗಳ ಪೂರ್ಣ ಸಂದೇಶಗಳನ್ನು ಪರಿಶೀಲಿಸಲು ಸಹಾಯ ಮಾಡುತ್ತದೆ.

ನಿರ್ದಿಷ್ಟ ಅಪ್ಲಿಕೇಷನ್ ಅನ್ನು ತೆರೆಯುವ ಆಯ್ಕೆಯನ್ನು ಇದರಲ್ಲಿ ನೀಡಲಾಗಿದೆ. ಇದರಿಂದಾಗಿ ಈ ಅಪ್ಲಿಕೇಷನ್ ಅನ್ನು ಕ್ಲೋಸ್ ಮಾಡುವ ಅಗತ್ಯವಿಲ್ಲ. ಅಲ್ಲದೆ ಈ ಅಪ್ಲಿಕೇಷನ್ ಅಲ್ಲಿ ಡಾರ್ಕ್ ಥೀಮ್ ಆಯ್ಕೆಯೂ ಲಭ್ಯವಿದೆ. ಅನಿಯಮಿತ ಅಧಿಸೂಚನೆಗಳನ್ನು ಸಂಗ್ರಹಿಸಿ ಮತ್ತು ಸುಧಾರಿತ ಫಿಲ್ಟರ್‌ಗಳಂತಹ ಫೀಚರ್ಸ್‌ಗಳನ್ನು ನೀಡಲಾಗಿದೆ.



### ನೋಡುವುದು ಹೇಗೆ?

'ನೋಟಿಫಿಕೇಷನ್ ಹಿಸ್ಟರಿ ಲಾಗ್' ಆ್ಯಪ್ ಇಲ್ಲದ ಬಳಕೆದಾರರು ಫೋನ್‌ನ ಹೋಮ್ ಸ್ಕ್ರೀನ್‌ನಲ್ಲಿ ಲಾಂಗ್ ಪ್ರೆಸ್ ಮಾಡಿದರೆ 'ವಿಸಿಟ್‌ಗಳು' ತೆರೆದುಕೊಳ್ಳುತ್ತವೆ. ಆ 'ವಿಸಿಟ್'ಗಳ ಮೇಲೆ ಟ್ಯಾಪ್ ಮಾಡಬೇಕು

ನಂತರ ನೀವು ಕೆಳಗೆ ಸ್ಕ್ರಾಲ್ ಮಾಡಿದರೆ 'ಸೆಟ್ಟಿಂಗ್' ಆಯ್ಕೆ ಕಾಣುತ್ತದೆ. ಅದನ್ನು ಒತ್ತಿ ಹಿಡಿದು, ನಿಮ್ಮ ಹೋಮ್‌ಸ್ಕ್ರೀನ್‌ನಲ್ಲಿ ಇರಿಸಿ. ಅದರ ಶಾರ್ಟ್‌ಕಟ್ ರಚಿಸಲು 'ನೋಟಿಫಿಕೇಷನ್ ಲಾಗ್' ಅನ್ನು ಟ್ಯಾಪ್ ಮಾಡಿ. ನಂತರ ವಿಸಿಟ್ ಮೇಲೆ ಟ್ಯಾಪ್ ಮಾಡಿದರೆ ಡಿಲಿಟ್ ಆದಂತಹ ನೋಟಿಫಿಕೇಷನ್‌ಗಳು ಕಾಣುತ್ತವೆ. ■

